

## ಮುಂದುವರೆದು ಆಗಬೇಕಾದ್ದು

ಸಮಾಜದಲ್ಲಿ ಸಮಾನತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಾಗಬೇಕು. ಶಾಲಾ ಕಾಲೇಜು, ಉದ್ಯೋಗದ ಸ್ಥಳಗಳು ಎಲ್ಲಾ ಕಡೆ ಈ ಕಾರ್ಯಕ್ರಮಗಳು ನಡೆಯಬೇಕು ಲಿಂಗಸಮಾನತೆ, ಬೇರೆಬೇರೆರೀತಿಯ ಅಸಮಾನತೆ, ತಾರತಮ್ಯಗಳು ಹಾಗೆಯೇ ಸಮಾನತೆತರಬೇಕಾದಲ್ಲಿ ಮಾಡಬೇಕಾದಕೆಲಸಗಳಬಗ್ಗೆ ಕಾನೂನುವ್ಯವಸ್ಥೆಯಲ್ಲಿನಅಧಿಕಾರಿಗಳಿಗೆ (ಪೊಲೀಸ್, ನ್ಯಾಯವಾದಿಗಳು, ನ್ಯಾಯಾಧೀಶರು ಸೇರಿದಂತೆ ಎಲ್ಲರಿಗೆ) ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆಯಬೇಕು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ಥ ಹೆಣ್ಣುಮಕ್ಕಳು ಉಪಯೋಗಿಸಬಹುದಾದ ಸಾಂತ್ವನ ಕೇಂದ್ರಗಳು ಅಲ್ಲಲ್ಲಿ ಸ್ಥಾಪಿತವಾಗಬೇಕು

ಕಾನೂನುಗಳನ್ನು ರಚಿಸಲಾಗಿದೆ. ಅಷ್ಟೇ ಅಲ್ಲದೆ, ಉದ್ಯೋಗಸ್ಥ ಮಹಿಳೆಯರಲ್ಲಿ ಶೇ 75ರಷ್ಟು ಮಂದಿ ಒಂದಲ್ಲ ಒಂದು ರೀತಿಯ ಲೈಂಗಿಕ ಕಿರುಕುಳ ಅನುಭವಿಸುತ್ತಿರುವುದು ಕಂಡುಬಂದು, ಇದನ್ನು ನಿಯಂತ್ರಿಸಲು ವಿಶೇಷ ಕಾನೂನಿನ ಅವಶ್ಯಕತೆ ಇದೆ ಎಂದು ಕಂಡುಕೊಂಡು ಈ ಕಾನೂನನ್ನು ಜಾರಿಗೆ ತರಲಾಗಿದೆ. ಈ ಕಾನೂನಿನ ಪ್ರಸ್ತಾವನೆಯಲ್ಲಿ ಆತ್ಮಗೌರವ, ಘನತೆಯೊಂದಿಗೆ ಉದ್ಯೋಗ ನಿರ್ವಹಿಸುವುದು ಕೂಡ ಮಹಿಳೆಯರ ಮೂಲಭೂತ ಜೀವಿಸುವ ಹಕ್ಕಿನ ಭಾಗವೇ ಆಗಿದೆ ಎಂದು ಹೇಳಲಾಗಿದೆ.

ಉದ್ಯೋಗದ ಸ್ಥಳದಲ್ಲಿ ನಡೆಯುವ ಯಾವುದೇ ಸೂಕ್ಷ್ಮ ಲೈಂಗಿಕ ಕಿರುಕುಳವನ್ನೂ ಮಾತನಾಡದೇ ಸಹಿಸಬೇಕೆಂಬ ಅಸಹಾಯಕತೆ ಮಹಿಳೆಗೆ ಇಲ್ಲ ಎಂದು ಈ ಕಾನೂನು ಘೋಷಿಸುವುದರೊಂದಿಗೆ, ಆಕೆಯ ಗೌರವ, ಹಾಗೂ ವಿವರಗಳ ಗೌಪ್ಯವನ್ನೂ ಕಾಪಾಡುವಂತೆ ಕಟ್ಟುನಿಟ್ಟಾಗಿ ನಿಯಮಗಳನ್ನು ರೂಪಿಸಿದೆ. ಅಂದರೆ, ಆಕೆಯ ಹೆಸರು, ದೂರಿನ ವಿವರಗಳು ಸಮಿತಿಯ ಸದಸ್ಯರ ಹೊರತಾಗಿ ಯಾರಿಗೂ ತಿಳಿಯಬಾರದು. ತಿಳಿಸಿದಲ್ಲಿ, ಯಾರು ಹಾಗೆ ತಿಳಿಸುವರೋ ಅವರಿಗೆ ದಂಡ ವಿಧಿಸಬೇಕೆಂಬ ಕಟ್ಟುನಿಟ್ಟಾದ ನಿಯಮವನ್ನು ಈ ಕಾನೂನು ಹೇಳುತ್ತದೆ.

### ಸಾರ್ವಜನಿಕ ಸ್ಥಳದಲ್ಲಿ ದೌರ್ಜನ್ಯ

ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ಲೈಂಗಿಕ ಕಿರುಕುಳ, ಫೋನ್, ಇಮೇಲ್‌ಗಳ ಮೂಲಕ ನಡೆಯುವ ಕಿರುಕುಳ, ಬೆದರಿಕೆ, ಇವನ್ನು ಐಪಿಸಿ (ದಂಡ ಸಂಹಿತೆ), ಹಾಗೂ ಐಟಿ ಕಾನೂನು (ಇನ್ಫಾರ್ಮೇಶನ್ ಟೆಕ್ನಾಲಜಿ ಆಕ್ಟ್) ಇವುಗಳ ಮೂಲಕ ಪ್ರಶ್ನಿಸಬಹುದಾಗಿದೆ. ಸಾರ್ವಜನಿಕ ಸ್ಥಳದಲ್ಲಿ ನಡೆಯುವ ಈ ಕೃತ್ಯಗಳನ್ನು 'ಕ್ರೈಂ' ಎಂದು ಪರಿಗಣಿಸಿ ಅದಕ್ಕೆ ತಕ್ಕಂತೆ ಪೊಲೀಸ್ ದೂರು, ತನಿಖೆ, ಶಿಕ್ಷೆ – ಇವುಗಳನ್ನು ಕಾನೂನು ವಿಧಿಸಿದೆ.

ಇಂಥಾ ಕೃತ್ಯಗಳು ನಡೆದಾಗ ಮೊದಲಿಗೆ ಸಂತ್ರಸ್ಥ ಮಹಿಳೆ ಪೊಲೀಸ್ ದೂರು ನೀಡಬೇಕು. ಅತ್ಯಾಚಾರದಂಥ ಕೃತ್ಯಗಳಲ್ಲಿ ಆದಷ್ಟೂ ತಕ್ಷಣವೇ ವೈದ್ಯಕೀಯ ತಪಾಸಣೆ ನಡೆಸಿ, ಸಾಧ್ಯವಾದಷ್ಟೂ ಸಾಕ್ಷಿ ಆಧಾರಗಳನ್ನು ಒಟ್ಟುಮಾಡಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟು ಎಫ್‌ಐಆರ್ ದಾಖಲಿಸಬೇಕು. ಫೋನ್, ಇಮೇಲ್‌ಗಳ ಮೂಲಕ ಕಿರುಕುಳ, ಬೆದರಿಕೆ ನಡೆದಾಗಲೂ ತಕ್ಷಣ ಸೈಬರ್ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಬೇಕು.

### ವಿವೇಕವೇ ಕೊನೆಯ ದಾರಿ

ಇವೆಲ್ಲ ಕಾನೂನುಗಳು ಇದ್ದರೂ ಮಹಿಳೆಯರ ಮೇಲೆ ನಡೆಯುವ ಹಿಂಸೆ, ಕ್ರೌರ್ಯಗಳು ಹೆಚ್ಚುತ್ತಲೇ ಇವೆ. ಬೇರೆಬೇರೆ ರೂಪಗಳನ್ನು ತಾಳುತ್ತಿವೆ. ಸಮಾಜದ ಹಲವು ಸ್ಥರಗಳಲ್ಲಿ ಬೇರೂರಿರುವ ಲೈಂಗಿಕ ತಾರತಮ್ಯ, ಪೂರ್ವಗ್ರಹಗಳು ಇದಕ್ಕೆ ಮುಖ್ಯ ಕಾರಣ ಎಂಬುದನ್ನು ಹಲವು ಸಮಾಜಶಾಸ್ತ್ರದ ಸಮೀಕ್ಷೆ, ಸಂಶೋಧನೆಗಳು ಸೂಚಿಸುತ್ತವೆ.

ಜನರು, ನಮ್ಮ ಮನಃಸ್ಥಿತಿ, ಮಹಿಳೆಯನ್ನು, ಕುಟುಂಬಗಳನ್ನು ನಾವು ಕಾಣುವ ರೀತಿ, ಮಹಿಳೆಯ ಶೀಲವನ್ನು, ಗೌರವವನ್ನು ಅಳೆಯುವ ರೀತಿ ಬದಲಾಯಿಸಿಕೊಳ್ಳುವುದೇ ಕೊನೆಯ ಮತ್ತು ವಿವೇಕದ ದಾರಿ. ಅದಾಗದೆ ವರದಕ್ಷಿಣೆ, ಕುಟುಂಬದೊಳಗಿನ ಹಿಂಸಾಚಾರ, ಸಾರ್ವಜನಿಕ ಸ್ಥಳಗಳಲ್ಲಿ ಆಕೆಯ ಮೇಲೆ ನಡೆಯುವ ಅತ್ಯಾಚಾರ, ಕ್ರೌರ್ಯ, ಉದ್ಯೋಗದ ಸ್ಥಳಗಳಲ್ಲಿ ನಡೆಯುವ ತಾರತಮ್ಯ, ಕಿರುಕುಳ – ಇವು ಯಾವುದನ್ನೂ ನಿಯಂತ್ರಿಸುವುದು, ತಡೆಯುವುದು ಸಾಧ್ಯವಾಗದೇ ಹೋಗುತ್ತದೆ.

ಈ ನಿಟ್ಟಿನಲ್ಲಿ ಸಮಾಜ ಪ್ರಜ್ಞೆಯನ್ನು, ಮಹಿಳೆ ಪುರುಷರ ಬಗೆಗಿನ ನಮ್ಮ ಪೂರ್ವಗ್ರಹಗಳು, ನಂಬಿಕೆ ನಡವಳಿಕೆಗಳನ್ನು ನಾವು ಪ್ರಶ್ನಿಸುತ್ತಾ, ತಿದ್ದುತ್ತಾ ನಡೆಯುವುದು ಅನಿವಾರ್ಯವಾಗಿದೆ. ಮನುಷ್ಯ ಸಮಾಜ ವಿಕಸನಗೊಳ್ಳುತ್ತಾ ಹೋದಂತೆ ಸಮಾನತೆಯ ಸಮಾಜವನ್ನು, ಎಲ್ಲರನ್ನೂ ಒಳಗೊಂಡಂತೆ ಬೆಳೆಯುವ ಮನಸ್ಸನ್ನು ರೂಪಿಸುತ್ತಾ, ರೂಢಿಸಿಕೊಳ್ಳುತ್ತಾ ಹೋಗುವುದು ಕೂಡಾ ಅತ್ಯಂತ ಅವಶ್ಯ. ಇಲ್ಲದಿದ್ದಲ್ಲಿ ನಾವು ಸಾಧಿಸುವ ಪ್ರಗತಿಗೆ ಯಾವ ಅರ್ಥವೂ ಉಳಿಯದ ಸ್ಥಿತಿ ನಮ್ಮದಾಗುತ್ತದೆ.

ನಮ್ಮ ನೆಲದಲ್ಲಿ ನಮ್ಮ ಹಾಗೆಯೇ ಹುಟ್ಟಿರುವ, ಬದುಕುತ್ತಿರುವ ಮಹಿಳೆಗೆ ಘನತೆಯ ಬದುಕು ಕೊಡಲು ಸಾಧ್ಯವಾಗದೇ ಹೋದರೆ ಚಂದ್ರನ ನೆತ್ತಿ ಮೆಟ್ಟುವ ನಮ್ಮ ಹಂಬಲ ಅರ್ಥಹೀನವಲ್ಲವೇ?

ಲೇಖಕರು ನ್ಯಾಯವಾದಿ

ಕಾನೂನುಗಳು ಇದ್ದರೂ ಮಹಿಳೆಯರ ಮೇಲೆ ನಡೆಯುವ ಹಿಂಸೆ, ಕ್ರೌರ್ಯಗಳು ಹೆಚ್ಚುತ್ತಲೇ ಇವೆ. ಬೇರೆಬೇರೆ ರೂಪಗಳನ್ನು ತಾಳುತ್ತಿವೆ. ಸಮಾಜದ ಹಲವು ಸ್ಥರಗಳಲ್ಲಿ ಬೇರೂರಿರುವ ಲೈಂಗಿಕ ತಾರತಮ್ಯ, ಪೂರ್ವಗ್ರಹಗಳು ಇದಕ್ಕೆ ಮುಖ್ಯ ಕಾರಣ ಎಂಬುದನ್ನು ಹಲವು ಸಮಾಜಶಾಸ್ತ್ರದ ಸಮೀಕ್ಷೆ, ಸಂಶೋಧನೆಗಳು ಸೂಚಿಸುತ್ತವೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in